ಅಪರ ಸಿವಿಲ್ ಜಡ್ಜ್ ಮತ್ತು ಜೆಎಮ್ಎಫ್‌ಸಿ ನ್ಯಾಯಾಲಯ, ದೇವನಹಳ್ಳಿ
ಸಿ.ಸಿ.ನಂ. **3648/2023**

ಪಿಡಬ್ಲ್ಯೂಃ 1 ಸಿಡಬ್ಲ್ಯೂ ಃ 1
ಸಾಕ್ಷಿಗೆ ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.
ದಿನಾಂಕಃ 09-02-2026

ಹೆಸರು ಃ ಪೂರ್ಣಿಮಾ
ಗಂಡನ ಹೆಸರು ಃ ಶಿವಣ್ಣ
ವಯಸ್ಸು ಃ 35
ಉದ್ಯೋಗ ಃ ಗೃಹಿಣಿ
ವಾಸ ಃ ದೇವನಾಯಕನಹಳ್ಳಿ

ಮುಖ್ಯ ವಿಚಾರಣೆ ಃ ಎಪಿಪಿಯವರಿಂದಃ

ಚಾಸಾ-2 ನನ್ನ ಪತಿ. ಚಾಸಾ 3 ನನ್ನ ಅತ್ತೆ. ಚಾಸಾ 4 ರಿಂದ ಚಾಸಾ 7 ರವರ ಪರಿಚಯ ನನಗೆ ಇದೆ. ಆರೋಪಿತರು ನನ್ನ ಭಾವನ ಮಕ್ಕಳು, ನಮ್ಮ ಸಂಬಂಧಿಕರು . ದಿನಾಂಕ 06-07-2023 ರಂದು ಬೆಳಗ್ಗೆ 10.30 ಗಂಟೆ ಸಮಯದಲ್ಲಿ ಆರೋಪಿಗಳು ನಮ್ಮ ಮನೆಯ ಬಳಿ ಬಂದು, ನಮ್ಮ ಮನೆಯ ಮುಂದೆ ಟೇಪ್ ನಿಂದ ಅಳತೆ ಮಾಡುತ್ತಿದ್ದರು. ಆಗ ಚಾಸಾ 2 ಏಕೆ ನಮ್ಮ ಮನೆಯನ್ನು ಅಳತೆ ಮಾಡುತ್ತಿದ್ದೀರಾ ಎಂದು ಕೇಳಿದಾಗ, ಆರೋಪಿತರು ಅವರನ್ನುದ್ದೇಶಿಸಿ ಅವಾಚ್ಯ ಶಬ್ದಗಳಿಂದ ಬೈದರು. ಇದನ್ನು ಪ್ರಶ್ನಿಸಿದ ನನಗೆ ಮತ್ತು ಚಾಸಾ 3 ರವರಿಗೂ ಸಹ ಅರೋಪಿತರು ಅವಾಚ್ಯ ಶಬ್ದಗಳಿಂದ ಬೈದು, ನಮ್ಮ ಕೂದಲು ಹಿಡಿದು ಎಳೆದಾಡಿ, ನಾನು ಹಾಕಿದ ಬಳೆಗಳನ್ನು ಒಡೆದು ಹಾಕಿದರು, ನನ್ನ ಬಟ್ಟೆಯನ್ನು ಹಿಡಿದು ಎಳೆದಾಡಿದರು, ಕಾಲಿನಿಂದ ಒದ್ದರು. ನತಂರ ನಾವು ಮನೆ ಒಳಗಡೆ ಹೋದೆವು. ಆಗ ಆರೋಪಿತರು ನಮ್ಮ ಮನೆಯ ಒಳಗೆ ನುಗ್ಗಿ ನಮ್ಮನ್ನುದ್ದೇಶಿಸಿ ಪದೇ ಪದೇ ಪೋಲೀಸ್ ದೂರು ನೀಡಿ ನಮಗೆ ತೊಂದರೆ ಕೊಡುತ್ತೀರಾ ಎಂದು ಹೇಳಿ ಅವಾಚ್ಯ ಶಬ್ದದಿಂದ ಬೈದರು. ಅವರು ತಂದಿದ್ದ ಕಡ್ಡಿ ಯಿಂದ ಚಾಸಾ 2 ರವರ ಮೇಲೆ ಹಲ್ಲೆ ಮಾಡಲು ಬಂದರು. ಆದರೆ ಚಾಸಾ 2 ರವರು ಮೊಬೈಲ್ ನಿಂದ ವೀಡಿಯೋ ಮಾಡಿದ್ದಕ್ಕೆ ಅವರ ಮೊಬೈಲನ್ನು ಆರೋಪಿಗಳು ಕಿತ್ತು

ಕೊಂಡರು. ನಂತರ ನಮ್ಮನ್ನುದ್ದೇಶಿಸಿ ಮನೆಯಿಂದ ಆಚೆ ಬಂದರೆ ಕೊಲೆ ಮಾಡದೇ ಬಿಡುವುದಿಲ್ಲ ಎಂದು ಹೇಳಿದರು. ನಂತರ ಈ ಬಗ್ಗೆ ಪೋಲೀಸರಿಗೆ ಮಾಹಿತಿ ತಿಳಿಸಿದ್ದು ಅವರು ಸ್ಥಳಕ್ಕೆ ಬಂದು ಆರೋಪಿಗಳಿಂದ ಚಾಸಾ 2 ರವರ ಮೊಬೈಲ್ ಕೊಡಿಸಿದರು. ಪೋಲೀಸರು ಠಾಣೆಗೆ ಬರುವಂತೆ ಸೂಚಿಸಿದ್ದು, ಅದೇ ದಿನ ಮಧ್ಯಾಹ್ನ 1.30 ಗಂಟೆಗೆ ಹೋಗಿ ನಾನು ಪೋಲೀಸ್ ಠಾಣೆಯಲ್ಲಿ ದೂರು ನೀಡಿರುತ್ತೇನೆ. ಸಾಕ್ಷಿ ದೂರನ್ನು ನೋಡಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಮಹಜರಿನಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು, ಸದರಿ ಸಹಿಯನ್ನು ನಾನು ನಮ್ಮ ಮನೆಯ ಹತ್ತಿರ ಪೋಲೀಸರು ಸಾಕ್ಷಿ ವಿಚಾರಣೆಗಾಗಿ ಬಂದಿದ್ದಾಗ ಮಾಡಿರುತ್ತೇನೆ. ಆ ಸಮಯದಲ್ಲಿ ಪೋಲೀಸರು ಛಾಯಾ ಚಿತ್ರವನ್ನು ತೆಗೆದಿದ್ದು, ಸಾಕ್ಷಿ ಅದನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-3 ಎಂದು ಗುರುತಿಸಲಾಯಿತು. ನಂತರ ನಾನು ನ್ಯಾಯಾಲಯಕ್ಕೆ ಹಾಜರಾಗಿ ಹೇಳಿಕೆ ನೀಡಿರುತ್ತೇನೆ.

**(ಮುಂದುವರಿದ ಮುಖ್ಯ ವಿಚಾರಣೆಗೆ ಕಾಲವಕಾಶ ಕೋರಿದ್ದು, ನೀಡಲಾಯಿತು.)**

(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಎ. ಒಪ್ಪಲಾಗಿದೆ.

ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ದೇವನಹಳ್ಳಿ